## ಅಧ್ಯಾಯ ೨ : ಕಲಕತ್ತೆಗೆ ಆಗಮನ

ದುಂಬಿಗಳನಾಕರ್ಷಿಸುವ ಹೂವಿನಂತೆ ।
ಜನರ ಗಮನವ ಸೆಳೆವನಿವನು ಹೋದಂತೆ ॥ ೬೨ ॥

ನಿತ್ಯಪೂಜೆಯ ಮನೆಯ ಜನರಷ್ಟೆ ಅಲ್ಲ ।
ಸುತ್ತಲಿನ ಜನರು ಸಹ ವಶವಾದರಲ್ಲ ॥ ೬೩ ॥

ಭಕ್ತಿಯಲಿ ಪೂಜಿಪುದ ನೋಡಿ ನಲಿಯುವರು ।
ವೃತ್ತಭಜನೆಗಳನ್ನು ಕೇಳಿ ತಣಿಯುವರು ॥ ೬೪ ॥

ಆ ಪ್ರದೇಶದೊಳಿರುವ ನರನಾರಿಯರಿಗೆ ।
ಅಚ್ಚುಮೆಚ್ಚಿನ ಸಲುಗೆ ಬೆಳೆಯಿತಿವನೊಳಗೆ ॥ ೬೫ ॥

ಸಾಮರಸ್ಯದೊಳವನ ಬಳಸುತಿರೆ ಜನರು ।
ಕಾಮಾರಪುಕುರದಂತಾಯಿತಾ ಊರು ॥ ೬೬ ॥

ಪೂಜೆಗಿವ ಬರಲು ಸಿಹಿತಿಂಡಿಗಳ ನೀಡಿ ।
ಹಾಲು ಹಣ್ಣುಗಳಿತ್ತು ಉಪಚಾರ ಮಾಡಿ ॥ ೬೭ ॥

ನಿತ್ಯವೂ ನೋಡಿ ಮಾತಾಡುವಾ ಬಯಕೆ ।
ಒಂದು ದಿನ ಕಾಣದಿರೆ ಬಹಳ ಚಡಪಡಿಕೆ ॥ ೬೮ ॥

ಮಧುರ ಕಂಠದೊಳಿವನು ಭಜನೆಗಳ ಹಾಡೆ ।
ಮುದವ ಪಡುತಿರ್ದರೆಲ್ಲರು ಕೇಳಿನೋಡಿ ॥ ೬೯ ॥

ಭಾವಪರವಶತೆಯಿಂದಲಿ ಸರಾಗದಲಿ ।
ಹಾಡಿದರೆ ಅಮೃತಸಿಂಚನವು ಹೃದಯದಲ್ಲಿ ॥ ೭೦ ॥

ಆ ನಾದದಾ ಅಲೆಯು ಮನ ತಣಿಸುತಿತ್ತು ।
ವೇದನೆಯ ಸರಿಸಿ ಸಂತೋಷ ಕೊಡುತ್ತಿತ್ತು ॥ ೭೧ ॥

ಆನಂದಬಾಷ್ಪ ಕಂಬನಿಯಾಗಿ ಇಳಿಯೆ ।
ಆ ಭಾವ ಕೇಳುಗರ ಹೃದಯವನು ಸೆಳೆಯೆ ॥ ೭೨ ॥

ಆ ರೀತಿ ಕೇಳಿದಾ ಹಾಡುಗಳ ಸ್ಮರಿಸಿ ।
ಮೆಲುಕಾಡುವರು ಮನದ ಗುಂಗಾಗಿ ಗ್ರಹಿಸಿ ॥ ೭೩ ॥

ಕಂಠದಲಿ ಕೊಳಲಡಗಿಕೊಂಡಿಹುದೊ ಎಂದು ।
ಸಂತಸದೊಳಿವನ ಪೊಗಳುವರು ಮನವೊಲಿದು ॥ ೭೪ ॥

ಭಾವಮಾಧುರ್ಯಕಾವುದೆ ಸೀಮೆಯಿಲ್ಲ ।
ಜಾತಿ ಭಾಷೆಯ ಗೊಡವೆ ಧ್ವನಿಗಿಂಪಿಗಿಲ್ಲ ॥ ೭೫ ॥

ಕಾಮಾರಪುಕುರವನೆ ಪ್ರತಿನಿಧಿಸುತಿತ್ತು ।
ಝಾಮಾಪುಕುರ, ನಾದವೇದಕೆ ಇಂಬಿತ್ತು ॥ ೭೬ ॥

ಪರಿಮಳದ ಲೇಪದಲಿ ಕಡ್ಡಿಯೂ ಸಹಿತ ।
ಪರಿಮಳಿಸಿ ಜನರ ಕೈಗೊದಗುವದು ಸತತ ॥ ೭೭ ॥

ಗುರುದೇವನಾ ಲೀಲೆ ಪೇಳಿ ಕೊನೆಯುಂಟೆ ।
ಬರೆಯಹೋದಂತೆಲ್ಲ ಚಿಗುರುವುದು ಚಿಂತೆ ॥ ೭೮ ॥

ಕಬ್ಬು ಬೆಳೆದಂತೆ ಸಿಹಿ ಹೆಚ್ಚಾಗದಿಹುದೆ ।
ಈ ಕಾವ್ಯದಾ ಬೆಳವಣಿಗೆ ಅದರಂತೆ ॥ ೭೯ ॥

ಒಣಗಿದಾ ಹೃದಯಕಿದು ತಂಪೆಂದು ತಿಳಿದು ।
ಮನವೆ ನೀ ಜತೆಗೂಡು ಸಾವಧಾನದೊಳು ॥ ೮೦ ॥

## ಅಧ್ಯಾಯ ೩ : ದಕ್ಷಿಣೇಶ್ವರದ ದೇವಾಲಯ

ಜಯರಾಮಕೃಷ್ಣ ವಾಂಛಿತಕಲ್ಪತರುವೆ ।
ಜಯ ಭಕ್ತಬಂಧು ಭಗವಾನ್ ಜಗದ್ಗುರುವೆ ॥
ಜಯ ರಾಮಕೃಷ್ಣರಾಪ್ತೇಷ್ಟ ಬಂಧುಗಳೆ ।
ನಯಭಯದಿ ಪಾದಧೂಳಿಯ ಬೇಡುತಿರುವೆ ॥

ಗುರುದೇವನಾಟ ರಮಣೀಯವತಿಗೂಢ ।
ವಿರಚಿಸುವ ರಂಗನಾಟಕದ ಪರಿ ನೋಡ ॥ ೮೦ ॥

ಹುಡುಗಾಟದಾರಂಭದಲಿ ಹಳ್ಳಿವಾಸ ।
ಹುಡುಕಾಟದೊಳಗಾಯ್ತು ನಗರಪ್ರವೇಶ ॥ ೮೧ ॥

ಆ ಲೀಲೆಯಲಿ ಪಾಲುಗೊಂಡಿರುವ ನಟರ ।
ಸಾಲಿನಲಿ ಹೆಸರಿಸುವೆನೀರ್ವ ಭಾವುಕರ ॥ ೮೨ ॥

ಶಿರದಿ ಧರಿಸುವೆನವರ ಪಾದಧೂಳಿಯನು ।
ಗುರುದೇವ ಸಿದ್ಧಗೊಳಿಸಿದ ಮಹಾತ್ಮರನು ॥ ೮೩ ॥

ಸಕಲಸಾಧನವು ಧನಮೂಲವೀ ಜಗದಿ ।
ಪ್ರಕಟ ವ್ಯವಹಾರ ಸಾಗುವುದಿಲ್ಲಿ ಹಣದಿ ॥ ೮೪ ॥

ಆ ಅಗತ್ಯವನರಿತು ಮುಖ್ಯ ಪಾತ್ರದೊಳು ।
ಸೇವೆ ಸಲ್ಲಿಸಿದವರ ಪರಿಯೊರೆವೆ ಕೇಳು ॥ ೮೫ ॥

ರಾಸಮಣಿ ರಾಣಿಯಾಕೆಯು ಸುಗುಣಭರಿತೆ ।
ಅವಳಳಿಯ ಮಥುರನವರಿಂದಲೀ ಚರಿತೆ ॥ ೮೬ ॥

ಭಾಗ್ಯಶಾಲಿಗಳವರು ಗುರುದೇವನನ್ನು ।
ಆದರದಿ ಸೇವಿಸಿದ ಪ್ರಮುಖರೆನ್ನುವೆನು ॥ ೮೭ ॥

ಅವರ ಚರಿತೆಯ ವಿವರವನು ಕೇಳಿ ತಿಳಿಯೆ ।
ಕುರುಡುಗಣ್ಣಿಗು ವಿಶ್ವ ಕಾಣಬಹುದದರಲೆ ॥ ೮೮ ॥

ಜಾನ್‌ಬಜಾರಿನ ವಾಸಿ ರಾಸಮಣಿ ರಾಣಿ ।
ಕಲಕತ್ತೆಯೊಂದು ಭಾಗದಲಿರುವ ರಮಣಿ ॥ ೮೯ ॥

ದೇಶದಾದ್ಯಂತ ಅವಳ ಕೀರ್ತಿ ಹಬ್ಬಿತ್ತು ।
ಸುಗುಣೆಯವಳೆನ್ನುವ ಪ್ರಸಿದ್ಧಿ ಪಸರಿಸಿತ್ತು ॥ ೯೦ ॥

ಅವಳ ಸಿರಿವಂತಿಕೆ ಕುಬೇರನಿಗು ಮಿಗಿಲು ।
ದಿಗಿಲಿನಿಂದವನಿಹ ತಿಜೋರಿ ಬಾಗಿಲೊಳು ॥ ೯೧ ॥